<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.ಃ 378/2018

ಪಿ. ಡಬ್ಲ್ಯು಼ಃ 03
ಸಿ. ಡಬ್ಲ್ಯು಼ಃ 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಉಮಾ ಶಂಕರ |
| ತಂದೆ/ಪತಿಯ ಹೆಸರು | ಃ | ಶಿವಲಿಂಗ |
| ವಯಸ್ಸು | ಃ | 37 ವರ್ಷ |
| ವೃತ್ತಿ | ಃ | ಆಸ್ಪತ್ರೆಯಲ್ಲಿ ಆಕ್ಸಿಜನ್ ಪೈಪ್ ಲೈನ್ ಕೆಲಸ |
| ವಾಸ | ಃ | ಮೊಗರಹಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 11.09.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಸಹಿ ಮಾಡಬಲ್ಲೆ. ಸಾಕ್ಷಿಗೆ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ2.-ಬಿ ಎಂದು ಗುರುತಿಸಲಾಯಿತು.

ಸುಮಾರು 2-3 ವರ್ಷಗಳ ಹಿಂದೆ ನಮ್ಮ ಗ್ರಾಮದ ಮಹದೇಶ್ವರ ಲಾಡ್ಜ ಹತ್ತಿರ ಪೋಲೀಸರ ಕೋರಿಕೆ ಮೇರೆಗೆ ನಿಪಿ.2 ಕ್ಕೆ ಸಹಿ ಮಾಡಿದ್ದೇನೆ. ನಿಪಿ.2 ಕ್ಕೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆಂದು ಗೊತ್ತಿಲ್ಲ. ನಿಪಿ.2 ರಲ್ಲಿ ಏನೆಲ್ಲಾ ಅಂಶಗಳನ್ನು ನಮೂದು ಮಾಡಿದ್ದಾರೆಂದು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

ನ್ಯಾಯಾಲಯದ ಮುಂದಿರುವ ಕಲ್ಲು ಮತ್ತು ಶರ್ಟ್ ಅನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 14.04.2018 ರಂದು ಬೆಳಿಗ್ಗೆ 08.30-09.00 ಸಮಯದಲ್ಲಿ ಪೋಲೀಸರು ನಮ್ಮ ಗ್ರಾಮದ ಮಾದೇಗೌಡರ ವಾಸದ ಮನೆಯ ಮುಂದೆ ಮಹದೇಶ್ವರ ಲಾಡ್ಜ ರಸ್ತೆಯಲ್ಲಿ ನನ್ನ

ಮತ್ತು ರಮೇಶ್ ರವರ ಸಮಕ್ಷಮ ಮಾದೇಗೌಡ ರವರು ತೋರಿಸಿದ ಜಾಗದಲ್ಲಿ ನಿಪಿ.2 ಪಂಚನಾಮೆ ಬರವಣಿಗೆ ಮಾಡಿದ್ದು ಆ ಕಾಲದಲ್ಲಿ ಪಿರ್ಯಾದಿ ಮಾದೇಗೌಡ ರವರು ಹಾಜರುಪಡಿಸಿದ ಕಲ್ಲು ಮತ್ತು ರಕ್ತ ಅಂಟಿದ್ದ ಶರ್ಟ್ ಅನ್ನು ನಮ್ಮ ಸಮಕ್ಷಮ ತಮ್ಮ ವಶಕ್ಕೆ ಪಡೆದರು ಎಂದರೆ ಸುಳ್ಳು. ಆ ಸಮಯಲ್ಲಿ ನಾನು ಹಾಜರಿದ್ದು ನಿಪಿ.2 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ.2 ಪಂಚನಾಮೆ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.